

ತಾನೇ ನೆಟ್ಟ ಹೊಂಗೆಯ ಗಿಡವನ್ನು ಕಣ್ತುಂಬಿಕೊಳ್ಳುತ್ತಿರುವ ಆಟೊ ಚಾಲಕ

# ಸುಂದರ ನಾಳೆಗಳಿಗೆ ಗಿಡ–ಮರಗಳ ದತ್ತು

'ಪರಿಸರ ದಿನ'ದ ಸಂದರ್ಭದಲ್ಲಿ ಅಥವಾ ಬೇರಾವುದೋ ವಿಶೇಷ ದಿನದ ನೆನಪಿಗಾಗಿ ಗಿಡ ನೆಡುವ ಕಾರ್ಯಕ್ರಮಗಳು ಪಟ್ಟಣ–ನಗರಗಳಲ್ಲಿ ಆಗಾಗ ನಡೆಯುತ್ತವೆ. ಮಹಾನಗರಪಾಲಿಕೆ ಹಾಗೂ ಅರಣ್ಯ ಇಲಾಖೆ ಪ್ರತಿವರ್ಷ ಲಕ್ಷ ಲಕ್ಷ ಗಿಡಗಳನ್ನು ನೆಡುತ್ತವೆ. ವಿದ್ಯಾರ್ಥಿಗಳು, ವಿವಿಧ ಸಂಸ್ಥೆಗಳ ಮುಖ್ಯಸ್ಥರು, ಗಣ್ಯರು ಗಿಡ ನೆಡುತ್ತಾರೆ. ನಂತರದ ದಿನಗಳಲ್ಲಿ ಆ ಗಿಡಗಳೆಲ್ಲ ಏನಾಗುತ್ತವೆ? ಅವುಗಳೆಲ್ಲ ಬೆಳೆದು ಮರಗಳಾಗಿದ್ದರೆ ನಾಡಿನ ತುಂಬ ಹಸಿರು ಆವರಿಸಿಬೇಕಿತ್ತಲ್ಲವೆ?

ಗಿಡ ನೆಡುವಿಕೆ ಹೆಸರಿನಲ್ಲಿ ನೆಟ್ಟ ಬಹುತೇಕ ಗಿಡಗಳು ಸೂಕ್ತ ಆರೈಕೆ ಇಲ್ಲದೆ ಒಣಗಿಹೋಗುತ್ತವೆ. ಬೆಂಗಳೂರಿನ ಉದಾಹರಣೆಯನ್ನೇ ನೋಡಿ. ರಾಜಧಾನಿಯಲ್ಲಿ ನೆಟ್ಟಿದ್ದ ಗಿಡಗಳೆಲ್ಲ ಮರಗಳಾಗಿದ್ದರೆ 'ಉದ್ಯಾನ ನಗರಿ' ಎನ್ನುವ ವಿಶೇಷಣಕ್ಕೆ ಎಂದೂ ಚ್ಯುತಿಬರುತ್ತಿರಲಿಲ್ಲ. ಆದರೆ, ಪರಿಸ್ಥಿತಿ ತದ್ವಿರುದ್ಧ. ಗಿಡ ನೆಡುವವರಿಗೆ ಲೆಕ್ಕವಷ್ಟೇ ಮುಖ್ಯ, ಫಲಿತಾಂಶದ ಬಗ್ಗೆ ನಿರ್ಲಕ್ಷ್ಯ.

ನೆಟ್ಟ ಗಿಡಗಳನ್ನು ಕಾಳಜಿಯಿಂದ ಬೆಳೆಸುವುದಕ್ಕೆ ಇರುವ ಮಾರ್ಗಗಳಾದರೂ ಏನು? ಅಂಥದೊಂದು ಮಾರ್ಗ ಅವುಗಳನ್ನು ದತ್ತು ಪಡೆಯುವುದು. ಮಕ್ಕಳನ್ನು, ಶಾಲೆಯನ್ನು, ಊರನ್ನು ದತ್ತು ಪಡೆಯುವ ರೂಢಿ ಇದೆಯಲ್ಲ – ಹಾಗೆಯೇ ಗಿಡಮರಗಳನ್ನು ದತ್ತು ಪಡೆಯುವ ಪದ್ಧತಿ ಶುರುವಾಗಬೇಕು.

ಕಾರ್ಪೊರೆಟ್ ಕಂಪನಿಗಳಿಗೆ ಅವುಗಳು ನೆಟ್ಟ ಸಸಿಗಳನ್ನು ರಕ್ಷಿಸುವ ಹೊಣೆಯನ್ನು ಕಡ್ಡಾಯ ಮಾಡಬೇಕು. ಮಹಾನಗರ ಪಾಲಿಕೆಯವರು ಮನೆಯ ಮುಂದೆ ನೆಟ್ಟ ಸಸಿಯನ್ನು ಆಯಾ ಮನೆಗಳ ಮಾಲಿಕರು ದತ್ತು ಪಡೆದು ಪೋಷಿಸಬೇಕು. ಮನೆಯ ಮುಂದೆ ಕಸವಾಗುತ್ತದೆ, ಮನೆಯ ಅಂದ ಕೆಡುತ್ತದೆ, ವಾಹನ ನಿಲ್ಲಿಸಲು ಜಾಗವಿಲ್ಲ ಎಂದು ಗಿಡಮರಗಳನ್ನು ನಿರ್ಲಕ್ಷಿಸುವುದು ಸರಿಯಲ್ಲ.

ಮಳೆಗಾಲದಲ್ಲಿ ಮರಬಿದ್ದ ಜಾಗದಲ್ಲಿ ಮತ್ತೆ ಗಿಡ ನೆಟ್ಟು, ಉದ್ಯಾನವನದಲ್ಲಿನ, ರಸ್ತೆಬದಿಯಲ್ಲಿನ, ಮರಗಳನ್ನು ದತ್ತು ಕೊಟ್ಟು ಸಂರಕ್ಷಿಸುವ ಕೆಲಸವನ್ನು ಸ್ಥಳೀಯ ಆಡಳಿತಗಳು ಮಾಡಬೇಕು. ಮರವನ್ನೇ ಮಕ್ಕಳೆಂದು ಸಾಕಿ ಸಲುಹಿದ 'ಸಾಲುಮರದ ತಿಮ್ಮಕ್ಕನ' ಸಾಹಸವನ್ನ ನೆನೆದು ನಾವೆಲ್ಲ ಒಂದೊಂದು ಮರವನ್ನು ದತ್ತು ಪಡೆಯಬೇಕು ಮರವನ್ನು ಬೆಳೆಸಬೇಕು. ಹಾಗಾದಾಗ, ನಾಡು ಹಸಿರಾಗುತ್ತದೆ, ಬದುಕಿಗೆ ಉಸಿರು ದೊರೆಯುತ್ತದೆ.

■ ಮಂಜುನಾಥ ಉಮೇಶ ನಾಯ್ಕ

